## ಆಧಾರ್ ಸಮರ್ಥಗೊಳಿಸುವ ಸೇವೆಯ ಸಮ್ಮತಿ/ಅನುಮೋದನೆಗಾಗಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಸೇರಿಸುವುದು

ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಸೂಚನೆ ಹಾಗೂ ಮಾರ್ಗಸೂಚಿಗಳಂತೆ ಸಮಾಜ ಕಲ್ಯಾಣ ಇಲಾಖೆ ಸೇರಿ ಎಲ್ಲಾ ಇಲಾಖೆಗಳು ದಿನಾಂಕ: 30-03-2017 ರೊಳಗಾಗಿ ಫಲಾನುಭವಿಗಳು ನೇರವಾಗಿ ಸೇವೆ/ಸೌಲಭ್ಯ/ನೆರವು/ವೇತನ/ಸಹಾಯಾನುದಾನ ಪಡೆಯಲು DBT (Direct Benefit Transfer) ಯನ್ನು ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಇಲಾಖೆಯಿಂದ ವಿದ್ಯಾರ್ಥಿ ವೇತನ ಪಡೆಯುತ್ತಿರುವ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಡಿಬಿಟಿ ಅನುಷ್ಠಾನಗೊಳಿಸಬೇಕಾಗಿದ್ದು, ಡಿಬಿಟಿಯಡಿ ಬರುವ ಎಲ್ಲಾ ಫಲಾನುಭವಿಗಳ ಬ್ಯಾಂಕ್ ಖಾತೆಗಳನ್ನು ಆಧಾರ್ ಸಮರ್ಥಗೊಳಿಸುವ ಸೇವೆಗೆ ಒಳಪಡಿಸತಕ್ಕದ್ದು. ಆದ್ದರಿಂದ, 2016-17 ನೇ ಸಾಲಿಗೆ ಹಾಗೂ ಮುಂದಿನ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿ ವೇತನವನ್ನು ಪಡೆಯುವ ಎಲ್ಲಾ ಫಲಾನುಭವಿ ವಿದ್ಯಾರ್ಥಿಗಳು ಆಧಾರ್ ಸಮರ್ಥಗೊಳಿಸುವ ಸೇವೆಗೆ ಮತ್ತು ಆಧಾರ್ ಸಂಖ್ಯೆಯನ್ನು ತಮ್ಮ ಬ್ಯಾಂಕ್ ಖಾತೆಗೆ ನೀಡಲು ಸಮ್ಮತಿಯನ್ನು ನೀಡಬೇಕು. ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೇರಿಸಲು ನಿಗಧಿತ ನಮೂನೆಯು ಆನ್‌ಲೈನ್‌ನಲ್ಲಿ ಲಭ್ಯವಿದ್ದು, ಈ ನಮೂನೆಯನ್ನು ಇಲಾಖೆಯ ವೆಬ್‌ಸೈಟ್ http://sw.kar.nic.in ನಲ್ಲಿ ವಿದ್ಯಾರ್ಥಿವೇತನ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು. ಫೆಬ್ರವರಿ 15, 2017 ರೊಳಗಾಗಿ ಎಲ್ಲಾ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಆಧಾರ್ ಸಮರ್ಥಗೊಳಿಸುವ ಸೇವೆಗೆ ಆನ್‌ಲೈನ್‌ನಲ್ಲಿ ಸಮ್ಮತಿ ನೀಡುವುದು.

### ಆನ್‌ಲೈನ್‌ಲ್ಲಿ ಸಮ್ಮತಿ ನೀಡಲು ಈ ಕೆಳಗಿನ ಸೂಚನೆಗಳನ್ನು ಅನುಸರಿಸುವುದು :-

1. ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ http://sw.kar.nic.in ವೆಬ್‌ಸೈಟ್‌ಗೆ ಲಾಗ್ ಇನ್ ಆಗುವುದು. ನಂತರ ಸ್ಕಾಲರ್‌ಶಿಪ್ ಟ್ಯಾಬ್‌ನ ಕೆಳಗೆ SC/ST post-metric scholarship ಗೆ ಲಿಂಕ್ ಮಾಡುವುದು. ನಂತರ ತಮ್ಮ ರಿಜಿಸ್ಟರ್ ನಂಬರ್ ಮತ್ತು ಪಾಸ್‌ವರ್ಡ್‌ನ್ನು ಲಾಗಿನ್ ಮಾಡುವುದು.
2. ಲಾಗ್-ಇನ್ ಆದ ನಂತರ "Consent for authentication" ಲಿಂಕ್‌ನ್ನು ಕ್ಲಿಕ್ ಮಾಡುವುದು.
3. ನಂತರ, ಆಧಾರ್ ನಂಬರ್‌ನ್ನು ನಮೂದಿಸಿ ನಿಮ್ಮ ಸಮ್ಮತಿಯನ್ನು ಸೂಚಿಸುವುದು.
4. ಆಧಾರ್ ಕಾರ್ಡ್‌ನಲ್ಲಿ ಇರುವಂತೆ ತಮ್ಮ ಹೆಸರನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ನಮೂದಿಸತಕ್ಕದ್ದು. ಉದಾ:-

| | | |
|---|---|---|
| Name as it appears on Department website<br>Name as it appears on Aadhaar card | S N Rajkumar<br>Rajkumar S N | ✗ |

| | | |
|---|---|---|
| Name as it appears on Department website<br>Name as it appears on Aadhaar card | Rajkumar S N<br>Rajkumar S N | ✓ |

5. ಒಂದು ವೇಳೆ ನೊಂದಾಯಿಸುವ ಹೆಸರು ತಪ್ಪಾಗಿದ್ದಲ್ಲಿ , ಬ್ಯಾಂಕ್ ಖಾತೆ ಸಂಖ್ಯೆ ತಪ್ಪಾಗಿದ್ದಲ್ಲಿ ಅಥವಾ ಯಾವುದೇ ಮಾಹಿತಿಗಾಗಿ ತಮ್ಮ ಸಂಪೂರ್ಣ ವಿವರಗಳನ್ನು tohelpswkar@gmail.com ವಿಳಾಸಕ್ಕೆ ಸಲ್ಲಿಸಿ ಸರಿಪಡಿಸಿಕೊಳ್ಳತಕ್ಕದ್ದು ಅಥವಾ 080-22340956 ನಂಬರ್‌ಗೆ ಕರೆ ಮಾಡುವುದು.

2/2/2017